# <u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>

ಸಿ.ಸಿ.ನಂ.115/2024

ಪಿ.ಡಬ್ಲ್ಯೂ -01

ಸಿ.ಡಬ್ಲ್ಯೂ-01

**<u>ಸಾಕ್ಷಿಗೆ ದಿಃ 23.07.2025 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**
**<u>ಮುಂದುವರೆದ ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಆರೋಪಿ ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ. ಮು. ಮಾ. ಗಳನ್ನು 1 ರಿಂದ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರಃ ಟಿ.ಜಿ.ಟಿಃ ವಕೀಲರಿಂದಃ**

ಮಾಹಿತಿ ಬಂದಾಗ ಕೊಡವತ್ತಿ ಸುತ್ತಮುತ್ತ ಗಸ್ತು ಮಾಡುತ್ತಿದ್ದೇವು. ಅಲ್ಲಿಂದ ಎಡಿಯಾರು ಸರ್ಕಲ್ ಗೆ ಹೋಗಲು ಕಾಲು ಗಂಟೆ ತಗೆದುಕೊಂಡಿರುತ್ತೇವೆ. ನಾನು ಮತ್ತು ನನ್ನ ಸಿಬ್ಬಂದಿ ಪ್ರಶಾಂತ ಸಿಪಿಸಿ 1083 ಅವರೊಂದಿಗೆ ಗಸ್ತಿಗೆ ಹೋಗಿದ್ದೇವು. ಡಿ.ಎಸ್.ಪಿ ಅವರೊಂದಿಗೆ ಚಾಸಾ 4 ಮತ್ತು ಅವರ ಜೀಪ ಚಾಲಕ ಬಂದಿದ್ದನು. ಎಡಿಯೂರು ಸರ್ಕಲ್ ನಿಂದ ಘಟನಾ ಸ್ಥಳ ಅರ್ಧ ದಿಂದ ಮುಕ್ಕಾಲು ಕೀ ಮೀಟರ ಆಗುತ್ತದೆ. ನಮ್ಮ ವಾಹನದಲ್ಲಿ ನಮ್ಮ ಜೊತೆ 1 ಲ್ಯಾಪ್ ಟಾಪ್ ಮತ್ತು ಪ್ರಿಂಟರ್ ತಗೆದುಕೊಂಡು ಹೋಗಿರುತ್ತೇವೆ. ನಮ್ಮ ವಾಹನದಲ್ಲಿ ಸಾಮಾನ್ಯವಾಗಿ ಲ್ಯಾಪಟಾಪ್ ಮತ್ತು ಪ್ರಿಂಟರ್ ಇರುತ್ತದೆ.

ಸ್ಥಳಕ್ಕೆ ಹೋಗಲು ನಾನು ಮತ್ತು ನಮ್ಮ ಡಿ.ವಾಯ್.ಎಸ್. ಪಿ ಅವರು 5 ನಿಮಿಷ ಕಾಲ ತಗೆದುಕೊಂಡಿರುತ್ತೇವೆ. ಯಡಿಯೂರು ಬಸ್ ನಿಲ್ದಾಣದ ಬಳಿ ವಾಹನ ನಿಲ್ಲಿಸಿ ನಡೆದುಕೊಂಡು ಹೋಗಿರುತ್ತೇವೆ. ನಾವು ಹೋದ ಸ್ಥಳ ವಸತಿ ನಿಬಿಡ ಪ್ರದೇಶ ಆಗಿರುತ್ತದೆ ಎಂದರೆ ಸರಿ. ಅಕ್ಕಪಕ್ಕ ಜನರ ಓಡಾಡುತ್ತಾರೆ ಎಂದರೆ ಸರಿ. ದೂರನ್ನು ಸ್ಥಳದಲ್ಲಿಯೇ ಟೈಪ್ ಮಾಡಿರುತ್ತೇನೆ. ದೂರನ್ನು ತಯಾರು ಮಾಡಲು 15 ನಿಮಿಷ ಆಗಿರುತ್ತದೆ. ಮಹಜರನ ಜೊತೆ ಇರುವ ಸ್ಕೆಚ್ ನಲ್ಲಿ ಕಿಡಕಿ ಇರುವುದಿಲ್ಲವೆಂದರೆ ಸರಿಯಲ್ಲ. ನಮ್ಮ ಸಿಬ್ಬಂದಿ ಠಾಣೆಗೆ ಹೋಗಿ ವರದಿಯನ್ನು ನೀಡಿ ಮರಳಿ ಬರಲು ಮುಕ್ಕಾಲು ಗಂಟೆ ಆಗಿರುತ್ತದೆ.

ಆ ಸಮಯಕ್ಕೆ ಸರ್ಕಾರಿ ಕಚೇರಿಗಳು ಎಲ್ಲಾ ಮುಚ್ಚಿರುತ್ತವೆ ಎಂದರೆ ಸರಿ. ಚಾಸಾ 10 ಅವರು ಒಬ್ಬರೇ ಬಂದಿರುತ್ತಾರಾ ಅಥವಾ ಅವರ ಜೊತೆ ಬೇರೆ ಯಾರಾದರೂ ಬಂದಿರುತ್ತಾರೆ ಎಂದರೆ ಸಾಕ್ಷಿ ಚಾಸಾ 2 ಮತ್ತು 3 ಬಂದಿದ್ದು ಅವರು ಯಾವಾಗ ಬಂದಿರುತ್ತಾರೆಂದು ನಾನು ಗಮನಿಸಿರುವುದಿಲ್ಲ. ಮಹಜರನಲ್ಲಿ ಎಷ್ಟು ಮನೆಗಳಿಗೆ ಎಂದು ನಮೂದು ಮಾಡಿಲ್ಲವೆಂದರೆ ಸರಿ. ಮಹಜರನ ಪ್ರಿಂಟ್ ಅನ್ನು ಸಾಕೇಟ್ ಗೆ ಕನೆಕ್ಟ್ ಮಾಡಿ ತಗೆದಿರುತ್ತಾರೆ. ಮಹಜರನಲ್ಲಿ ಮೊಬೈಲ್ ಪ್ರಿಂಟರ್ ನ ಮೂಲಕ ಪ್ರಿಂಟ್ ತಗೆಯಲಾಗಿದೆ ಎಂದು ಬರೆಯಲಾಗಿದೆಎಂದರೆ ಸಾಕ್ಷಿ ಅದು ಪೋರ್ಟಲ್ ಪ್ರಿಂಟರ್ ಆಗಿರುತ್ತದೆಂದು ಹೇಳುತ್ತಾರೆ. ನನ್ನ ಸಮಕ್ಷಮ ಡಿ.ವಾಯ್.ಎಸ್.ಪಿ ಅವರ ಸಹಿಯನ್ನು ಮಹಜರಗೆ ಮಾಡಿರುವುದಿಲ್ಲ. ಮಹಜರನ್ನು ಮನೆಯ ಒಳಗಡೆ ಬರೆದುಕೊಂಡು ಬಂದು ಮನೆಗೆ ಹೊರಗಡೆ ಪ್ರಿಂಟ್ ತಗೆದಿರುತ್ತೇವೆಂದು ಹೇಳುತ್ತಾರೆ. ಈ ಪಂಚನಾಮೆಯಲ್ಲಿ ನಮೂದು ಇಲ್ಲವೆಂದರೆ ಸರಿಯಲ್ಲ.

ಮು. ಮಾ. ಗಳಂತಹ ತೂಕದ ಮೆಷಿನ್ ಗಳು ಎಲ್ಲಾ ಕಡೆ ದೊರೆಯುತ್ತದೆ ಎಂದರೆ ಸಾಕ್ಷಿ ಇರಬಹುದೆಂದು ಹೇಳುತ್ತಾರೆ. ನಾನು ಸ್ಥಳಕ್ಕೆ ಬೇಟಿ ನೀಡಿಲ್ಲ ಠಾಣೆಯಲ್ಲಿಯೇ ಕುಳಿತುಕೊಂಡು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿಲ್ಲ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ್ದೀರಾ ಎಂದರೆ ಸಾಕ್ಷಿ ತನಿಖಾಧಿಕಾರಿಗೆ ವಿವೇಚನಾ ವ್ಯಾಪ್ತಿಗೆ ಒಳಪಟ್ಟಿರುತ್ತದೆಂದು ಹೇಳುತ್ತಾರೆ. ಮಹಜರನ್ನು ಸ್ಥಳದಲ್ಲಿ ಮಾಡಿಲ್ಲವೆಂದರೆ ಸರಿಯಲ್ಲ. ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ**/-

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**